



## ಬಾಟಲಿಯಲ್ಲಿ ಅರಳಿದ ಕಲೆ...!

ಸಾಮಾನ್ಯವಾಗಿ ತಂಪು ಪಾನೀಯ, ನೀರು ಕುಡಿದಾದ ಮೇಲೆ ಪ್ಲಾಸ್ಟಿಕ್ ಬಾಟಲಿಗಳನ್ನು ಬಿಸಾಡುತ್ತೇವೆ. ಅದರ ಬದಲು ಅದರಿಂದಲೂ ಆಕರ್ಷಕ ಅಲಂಕಾರಿಕ ವಸ್ತುಗಳನ್ನು ತಯಾರಿಸಬಹುದು ಎಂಬುದರ ಬಗ್ಗೆ ನಮಗೆ ಗೊತ್ತೇ ಆಗುವುದಿಲ್ಲ. ಯಾರಾದರೂ ಆ ಬಗ್ಗೆ ಜಾಗೃತಿ ಮೂಡಿಸಿದರೆ ಹೌದಲ್ವಾ ಅಂಥ ಪಶ್ಚಾತ್ತಾಪ ಪಡುವುದು ಮಾಮೂಲಿ.

ಕೆಲಸದ ಮಧ್ಯೆ ಬಿಡುವಿನ ಸಂದರ್ಭದಲ್ಲಿ ನಾನು ತಯಾರಿಸಿದ ಕಲಾಕೃತಿಗಳಿವು. ಖಾಲಿ ಬಾಟಲಿಯ ಮೇಲೆ ಮೊದಲು ಪೆನ್ಸಿಲ್‌ನಿಂದ ಚಿತ್ರ ಬಿಡಿಸಬೇಕು. ಬಳಿಕ ಇದಕ್ಕೆ ವಾಟರ್ ಕಲರ್ ಬಳಸಿ ಸೂಕ್ತವಾದ ಬಣ್ಣ ತುಂಬಿದರೆ ಮನೆಯ ಶೋಕೇಸ್‌ನಲ್ಲಿ ಅಲಂಕಾರಿಕ ವಸ್ತುಗಳನ್ನಾಗಿ ಇಡಬಹುದು. ಇದೇ ರೀತಿ ಪ್ಲಾಸ್ಟಿಕ್ ಬಾಟಲಿಯಲ್ಲಿ ಆಕರ್ಷಕ ಪೆನ್ ಬಾಕ್ಸ್, ಚಿಲ್ಲರೆ ನಾಣ್ಯ ಹಾಕಿಡುವ ಪುಟ್ಟ ಪೆಟ್ಟಿಗೆ ತಯಾರಿಸಬಹುದು. ದುಬಾರಿ ಬೆಲೆ ತೆತ್ತು ಶೋಕೇಸ್‌ನಲ್ಲಿಡುವ ವಸ್ತುಗಳನ್ನು ಅಂಗಡಿಯಿಂದ ಖರೀದಿಸುವ ಬದಲು ಮನೆಯಲ್ಲೇ ತಯಾರಿಸಿದರೆ ಮನೆಯ ಅಲಂಕಾರವೂ ಆಗುತ್ತದೆ, ಖರ್ಚೂ ಉಳಿಯುತ್ತದೆ.

–ಸ್ನೇಹಾ ಕೆ., ಬೆಳ್ಮಣ್ಣು




## ಭಾರವಾರುತ್ತಿದೆ 10 ನಾಣ್ಯ

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬಿಡುಗಡೆ ಮಾಡಿದ ಹತ್ತು ರೂಪಾಯಿ ನಾಣ್ಯ ಅಮಾನ್ಯ ಆಗದಿದ್ದರೂ ಜನಸಾಮಾನ್ಯರ ಜೇಬಿಗೆ ವಿನಾಕಾರಣ ಭಾರವಾಗುತ್ತಿದೆ. ಹತ್ತು ರೂಪಾಯಿ ನಾಣ್ಯವನ್ನು ವ್ಯವಹಾರದ ರೂಪವಾಗಿ ಬಹಳಷ್ಟು ಜನರು ಪಡೆಯಲು ಈಗಲೂ ಹಿಂಜರಿಯುತ್ತಿದ್ದಾರೆ. ಇತ್ತೀಚೆಗೆ ಜವಳಿ ಅಂಗಡಿಯಲ್ಲಿ ಎಪ್ಪತ್ತು ರೂಪಾಯಿ ಹಿಂಪಡೆಯುವಾಗ ₹50 ನೋಟಿನೊಂದಿಗೆ ₹20ರ ಹೊಸನಾಣ್ಯ ಕೊಟ್ಟರು.

ಮಾರುಕಟ್ಟೆಯಲ್ಲಿ ₹30ಕ್ಕೆ ಸೊಪ್ಪು ಖರೀದಿಸಿ, ₹20ರ ನಾಣ್ಯದೊಟ್ಟಿಗೆ ಪರ್ಸ್‌ನ ಮೂಲೆಯಲ್ಲಿದ್ದ ₹10 ನಾಣ್ಯ ಕೊಟ್ಟೆ. ₹20ರ ಹೊಸ ನಾಣ್ಯವನ್ನಷ್ಟೇ ಪಡೆದುಕೊಂಡು ಸೊಪ್ಪು ಮಾರುವ ವ್ಯಕ್ತಿ ಅದನ್ನು ಹಿಂದು ಮುಂದು ತಿರುವಿ ತಿರುವಿ ನೋಡಿ ಜೇಬಿಗಿಳಿಸಿದ. ₹10ರ ನಾಣ್ಯವನ್ನು ಮಾತ್ರ 'ಇದು ನಡೆಯೋದಿಲ್ಲ' ಎಂದು ಹಿಂದಿರುಗಿಸಿದ. 'ಇದೇನಯ್ಯ, ಈ ಎರಡೂ ನಾಣ್ಯ ಸರ್ಕಾರದ್ದೆ... ಈ ₹10 ರೂಪಾಯಿ ನಾಣ್ಯವೇನು 'ಬಿಟ್ ಕಾಯಿನ್' ಅಲ್ಲಾ. ತಗೊಳ್ಳಿ' ಎಂದೆ. ಅದಕ್ಕೆ ಪ್ರತಿಯಾಗಿ ಆತ, 'ಅಯ್ಯೋ ಸಾರ್, ಈ ₹10 ನಾಣ್ಯ ಬಾಳಾ ವರ್ಷದಿಂದ ತಗೊಳ್ಳೋದನ್ನ ಬಿಟ್ ಬಿಟ್ಟೇವಿ. ₹20 ರೂಪಾಯಿ ನಾಣ್ಯ ಈವತ್ತೇ ನೋಡಿದ್ದು. ಹೊಸ್ದಾಗೈತಲ್ಲಾ ಇರ್ಲಿ ಅಂಥಾ ತಗೊಂಡೆ. ಬೇರೆ ಕೊಡಿ' ಎಂದ. ಚಲಾವಣೆಯಲ್ಲಿದ್ದರೂ ಚಲಾವಣೆಯಾಗದ ₹10ರ ನಾಣ್ಯವನ್ನು ಮತ್ತೆ ಪರ್ಸ್‌ನೊಳಗೆ ಇಟ್ಟು ಆತನಿಗೆ ನೋಟು ಕೊಟ್ಟು ಮುಂದೆ ಸಾಗಿದೆ.

–ರಘುನಾಥರಾವ್ ತಾಪ್ಸೆ, ದಾವಣಗೆರೆ

### ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly